ಕೋಲಾರ ಜಿಲ್ಲೆಯಲ್ಲಿ ಶಾಲಾ ಕಟ್ಟಡಗಳ ದುರಸ್ತಿ ಬಗ್ಗೆ.

೨೪೮೪. ಶ್ರೀ ಟಿ. ಎಸ್. ಮಣಿ (ಕೆ.ಜಿ.ಎಫ್.).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೋಲಾರ ಜಿಲ್ಲೆಯಲ್ಲಿ ಸಮರ್ಪಕವಾಗಿ ದುರಸ್ತಿಯಾಗದ ಶಾಲಾ ಕಟ್ಟಡಗಳ ಸಂಖ್ಯೆ ಮತ್ತು ಕೆ.ಜಿ.ಎಫ್. ನಲ್ಲಿ ಶಾಲಾ ಕಟ್ಟಡಗಳೆಷ್ಟು ?

ಆ) ಹೆಚ್ಚಿನ ಶಾಲಾ ಕಟ್ಟಡಗಳಿಗೆ ಬಾಗಿಲು ಕಿಟಗಿ ಬಾಗಿಲು ದ್ವಾರಗಳಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಕೋಲಾರ ಜಿಲ್ಲೆಯ ಶಾಲಾ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆಗಾಗಿ ಮತ್ತು ವಿಶೇಷವಾಗಿ ಕೆ.ಜಿ. ಎಫ್.ಗೆ ಒದಗಿಸಿರುವ ಮೊತ್ತವೆಷ್ಟು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಕೋಲಾರ ಜಿಲ್ಲೆಯಲ್ಲಿ ದುರಸ್ತಿಯಾಗದ ಶಾಲಾ ಕಟ್ಟಡಗಳ ಸಂಖ್ಯೆ ೫೦
ಕೆ.ಜಿ.ಎಫ್. ನಲ್ಲಿ ೦೧

ಆ) ೧೯೮೭-೮೮ನೇ ಆರ್ಥಿಕ ಸಾಲಿನಿಂದ ಕೋಲಾರ ಜಿಲ್ಲೆಯ ಶಾಲಾ ಕಟ್ಟಡಗಳ ಶಿಮೇಲಂಸ್ತು ಪಾರಿ ಒಳಪಟ್ಟಿರುತ್ತದೆ.

ಇ) ಜಿಲ್ಲಾ ಪರಿಷತ್ತಿನ ಆಯವ್ಯಯದ ಪ್ರಕಾರ ಯೋಜನೇತರ ಬಾಬ್ತಿನಲ್ಲಿ ಲೋಕೋಪಯೋಗಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ವಿಶೇಷ : ಸಾಮಾನ್ಯ ದುರಸ್ತಿಗೆಂದು ೯.೫೦ ಲಕ್ಷ ರೂ. ಗಳು ಒದಗಿಸಲಾಗಿದೆ.

ಭದ್ರಾ ನಾಲೆಯ ಬೈಪಾಸ್ ಕಾಲುವೆ.

೨೦೪೦. ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಕಂದಾಯ ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೪ನೇ ಇಸವಿಯಲ್ಲಿ ಪ್ರಾರಂಭವಾದ ದಾವಣಗೆರೆ ತಾಲ್ಲೂಕಿನ ಭದ್ರಾ ಕಾಲುವೆಯ ಬೈಪಾಸ್ ಚಾನಲ್ ಕೆಲಸ ಈಗ ಯಾವ ಹಂತದಲ್ಲಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಭದ್ರಾ ಯೋಜನೆಯ ದಾವಣಗೆರೆ ಶಾಖಾ ಕಾಲುವೆಯ ಆಡಿಯಲ್ಲಿ, ಹಿರೇಮೇಗಳಗೇರಿ ಕೆರೆಯ ಬಳಿ ಬೈಪಾಸ್ ಕಾಲುವೆಯ ೧೦ನೇ ಕಿ.ಮೀ. ಕೆಲಸವು ಪ್ರಗತಿಯಲ್ಲಿದ್ದು, ೩ ಮತ್ತು ೪ನೇ ಕಿ.ಮೀ. ಕೆಲಸವನ್ನು ಪೂರ್ತಿಗೊಳಿಸಲಾಗಿದೆ. ೨ನೇ ಕಿ.ಮೀ. ನಲ್ಲಿ ಸಹ ಕೆಲಸವನ್ನು ತೆಗೆದುಕೊಳ್ಳಲಾಗಿದ್ದು, ಭೂಸ್ವಾಧೀನ ಸಮಸ್ಯೆಯಿಂದಾಗಿ ೧೨೦ ಮೀಟರ್ ಉದ್ದದ ನಾಲೆಯ ಕೆಲಸವು ಸ್ಥಗಿತಗೊಂಡಿದೆ. ಭೂಸ್ವಾಧೀನ ಸಮಸ್ಯೆ ಪರಿಹಾರ ಆದ ನಂತರ ಈ ಕಾರ್ಯವನ್ನು ಸಹ ಪೂರ್ಣಗೊಳಿಸಲಾಗುವುದು.

ರಾಜ್ಯದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಿಗಳ ಕಾರ್ಯನಿರ್ವಹಣೆ ಬಗ್ಗೆ

೧೭೮೧. ಶ್ರೀ ಮಲ್ಲಿಕಾರ್ಜುನಖರ್ಗೆ (ಗುರುಮಿಠ್ಕಲ್).— ಮಾನ್ಯ ಕಂದಾಯ ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಿಗಳ ಸಂಖ್ಯೆ ಮತ್ತು ೧೯೮೭-೮೮ನೇ ಸಾಲಿನಲ್ಲಿ ಪ್ರತಿ ಪ್ರಾಧಿಕಾರಕ್ಕೆ ಹಂಚಿಕೆಯಾದ ಹಣವೆಷ್ಟು ?